**ಕರ್ನಾಟಕ ಸರ್ಕಾರ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**
**ಬೆಂಗಳೂರು**
**ನೋವೆಲ್ ಕರೋನಾ ವೈರಸ್ (ಕೋವಿಡ್-19)**
**ಪತ್ರಿಕಾ ಪ್ರಕಟಣೆ**

**ದಿನಾಂಕ: 27.03.2020** **ಸಮಯ : ಮಧ್ಯಾಹ್ನ 2 ಗಂಟೆ**

ಇಲ್ಲಿಯವರೆಗೆ ಭಾರತವೂ ಸೇರಿದಂತೆ 200 ದೇಶ/ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕರೋನಾ ವೈರಸ್‌ನ್ನು (ಕೋವಿಡ್-19) ಅಂತರ್‍ರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (ಪಿಹೆಚ್‌ಐಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. 11 ಮಾರ್ಚ್ 2020ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್-19ನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ರೋಗ ತಡೆಗಟ್ಟುವ ಕ್ರಮಗಳನ್ನು ಎಲ್ಲ ರೀತಿಯ ಸರ್ವೇಕ್ಷಣೆಯನ್ನು ಮತ್ತು ಸಮೂಹ ನಿಯಂತ್ರಣ ಕಾರ್ಯತಂತ್ರಗಳನ್ನು ಬಲಪಡಿಸಿದೆ. ಅಂತರ್‍ರಾಷ್ಟ್ರೀಯ ಪ್ರಯಾಣಿಕರ ಸಾರ್ವತ್ರಿಕ ತಪಾಸಣೆ ಮುಂದುವರೆದಿದೆ.

**"ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 64 ಕೋವಿಡ್-19 ಖಚಿತಪಟ್ಟ ಪ್ರಕರಣಗಳು, ಅವುಗಳಲ್ಲಿ 3 ಮರಣ ಮತ್ತು 5 ಜನ ಬಿಡುಗಡೆ ಹೊಂದಿರುತ್ತಾರೆ."**

- 56 ಕೋವಿಡ್-19 ಪೀಡಿತ ರೋಗಿಗಳು ಗೊತ್ತುಪಡಿಸಿದ ಆಸ್ಪತ್ರೆಗಳ ಪ್ರತ್ಯೇಕ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯವು ಸ್ಥಿರವಾಗಿರುತ್ತದೆ.
- ಕರ್ನಾಟಕ ರಾಜ್ಯದಲ್ಲಿ ನೂತನವಾಗಿ 9 ಹೊಸ ಕೋವಿಡ್ -19 ಪೀಡಿತರ ವಿವರ ಕೆಳಕಂಡಂತೆ ಇರುತ್ತದೆ.
  - P56: 10 ತಿಂಗಳ ಗಂಡು ಮಗು, ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿ, ಯಾವುದೇ ಕೋವಿಡ್-19 ಪ್ರಭಾವಿತ ದೇಶಕ್ಕೆ ಪ್ರಯಾಣಿಸಿದ ಹಿನ್ನಲೆಯಿರುವುದಿಲ್ಲ. ಪ್ರಕರಣವನ್ನು ದಕ್ಷಿಣ ಕನ್ನಡ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ. ಪ್ರಥಮ ಮಾಹಿತಿಗಳಂತೆ ಪೊಷಕರು ಮಗುವಿನೊಂದಿಗೆ ಕೆಲವು ದಿನಗಳ ಹಿಂದೆ ಕೇರಳ ರಾಜ್ಯ /ಬಾರ್ಡ್‌ರ್‌ಗೆ ಭೇಟಿ ನೀಡಿರುವ ಹಿನ್ನಲೆಯಿರುತ್ತದೆ. ವಿಸ್ತೃತ ಮಾಹಿತಿಯೂ ಕಲೆಹಾಕಿ ತಪಾಸಣೆಯೂ ಪ್ರಗತಿಯಲ್ಲಿರುತ್ತದೆ. ಹಾಗೂ 6 ಪ್ರಾಥಮಿಕ ಸಂಪರ್ಕ (Primary Contact) ವ್ಯಕ್ತಿಗಳನ್ನು ಗುರುತಿಸಲಾಗಿ ಇವರುಗಳನ್ನು ಮನೆ ಕ್ವಾರಂಟೈನ್ ಮಾಡಲಾಗಿರುತ್ತದೆ.
  - P57: 20 ವರ್ಷದ ಮಹಿಳೆ ಬೆಂಗಳೂರು ನಿವಾಸಿಯಾಗಿದ್ದು, ಕೋಲಂಬೋ ದೇಶಕ್ಕೆ ಪ್ರಯಾಣ ಬೆಳೆಸಿ ದಿನಾಂಕ 15.03.2020 ರಂದು ಭಾರತಕ್ಕೆ ಹಿಂದಿರುಗಿರುವ ಪ್ರಯಾಣ ಹಿನ್ನಲೆಯಿರುತ್ತದೆ. ಪ್ರಕರಣವನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
  - P58: 25 ವರ್ಷದ ಮಹಿಳೆ ಬೆಂಗಳೂರು ನಿವಾಸಿಯಾಗಿದ್ದು, ಲಂಡನ್ ದೇಶಕ್ಕೆ ಪ್ರಯಾಣ ಬೆಳೆಸಿ ದಿನಾಂಕ 18.03.2020 ರಂದು ಭಾರತಕ್ಕೆ ಹಿಂದಿರುಗಿರುವ ಪ್ರಯಾಣ ಹಿನ್ನಲೆಯಿರುತ್ತದೆ. ಪ್ರಕರಣವನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
  - P59: 35 ವರ್ಷದ ಮಹಿಳೆ ಬೆಂಗಳೂರು ನಿವಾಸಿಯಾಗಿದ್ದು P25 ರ ಸಂಪರ್ಕ ವ್ಯಕ್ತಿ (ಮನೆ ಕೆಲಸದ ಮಹಿಳೆ) ಈ ಪ್ರಕರಣವನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
  - P60: 60 ವರ್ಷದ ಪುರುಷ ತುಮಕೂರು ಜಿಲ್ಲೆಯ ನಿವಾಸಿಯಾಗಿದ್ದು, ದೆಹಲಿಗೆ ರೈಲು ಮುಖಾಂತರ ದಿನಾಂಕ 13.03.2020ರಂದು ಪ್ರಯಾಣ ಬೆಳೆಸಿರುತ್ತಾರೆ. ಇವರು ದಿನಾಂಕ 27.03.2020ರಂದು ಬೆಳಿಗ್ಗೆ ತುಮಕೂರು ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಮರಣ

ಹೊಂದಿರುತ್ತಾರೆ. 24 ಹೈರಿಸ್ಕ್ ಪ್ರಾಥಮಿಕ ಸಂಪರ್ಕ ವ್ಯಕ್ತಿಗಳನ್ನು ಗುರುತಿಸಲಾಗಿರುತ್ತದೆ. ಇವುಗಳಲ್ಲಿ 13 ಪ್ರಕರಣಗಳನ್ನು ನಿಗಧಿತ ಆಸ್ಪತ್ರೆಗಳಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ ಮತ್ತು 8 ನೆಗೆಟಿವ್ ಪ್ರಕರಣಗಳು ಹಾಗೂ 3 (ವೈದ್ಯಕೀಯ ಸಿಬ್ಬಂದಿ) ಪ್ರಕರಣಗಳನ್ನು ಮನೆ ಕ್ವಾರಂಟೈನ್ ಮಾಡಲಾಗಿರುತ್ತದೆ.

- P61: 33 ವರ್ಷದ ಮಹಿಳೆ ಬೆಂಗಳೂರು ನಿವಾಸಿಯಾಗಿದ್ದು, P25ರ ಸಂಪರ್ಕ ವ್ಯಕ್ತಿ (ಮನೆ ಕೆಲಸದ ಮಹಿಳೆ) ಈ ಪ್ರಕರಣವನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P62: 22 ವರ್ಷದ ಪುರುಷ, ಉತ್ತರ ಕನ್ನಡ ಜಿಲ್ಲೆಯ ನಿವಾಸಿಯಾಗಿದ್ದು, ದುಬೈ ದೇಶಕ್ಕೆ ಪ್ರಯಾಣ ಬೆಳೆಸಿರುವ ಹಿನ್ನಲೆಯಿರುತ್ತದೆ. ಪ್ರಕರಣವನ್ನು ಉತ್ತರ ಕನ್ನಡ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P63: 18 ವರ್ಷದ ಪುರುಷ, ದಾವಣಗೆರೆ ಜಿಲ್ಲೆಯ ನಿವಾಸಿಯಾಗಿದ್ದು, ಪ್ಯಾರಿಸ್ ದೇಶಕ್ಕೆ ಪ್ರಯಾಣ ಬೆಳೆಸಿರುವ ಹಿನ್ನಲೆಯಿದ್ದು, ದಿನಾಂಕ 18.03.2020 ರಂದು ಭಾರತಕ್ಕೆ ವಾಪಸ್ಸಾಗಿರುತ್ತಾರೆ. ಪ್ರಕರಣವನ್ನು ದಾವಣಗೆರೆ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P64: 21 ವರ್ಷದ ಪುರುಷ, ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿಯಾಗಿದ್ದು, ದುಬೈ ದೇಶಕ್ಕೆ ಪ್ರಯಾಣ ಬೆಳೆಸಿರುವ ಹಿನ್ನಲೆಯಿದ್ದು, ದಿನಾಂಕ 22.03.2020 ರಂದು ಭಾರತಕ್ಕೆ ವಾಪಸ್ಸಾಗಿರುತ್ತಾರೆ. ಪ್ರಕರಣವನ್ನು ದಕ್ಷಿಣ ಕನ್ನಡ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

* P1, P2, P3, P4 ಮತ್ತು P5 ಪ್ರಕರಣಗಳು ಗುಣಮುಖ ಹೊಂದಿ ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ ಮತ್ತು P6, P53 & P60 ಮರಣ ಹೊಂದಿರುತ್ತಾರೆ.

**Karnataka District wise update**

| Sl. No | District | Total confirmed cases | cured / discharged | Death |
|---|---|---|---|---|
| 1 | Bengaluru | 39 | 5* | 1 |
| 2 | Kalburgi | 3 | 0 | 1 |
| 3 | Kodagu | 1 | 0 | 0 |
| 4 | Chikkaballapura | 3 | 0 | 0 |
| 5 | Mysore | 3 | 0 | 0 |
| 6 | Dharwad | 1 | 0 | 0 |
| 7 | Dakshina kannada | 7 | 0 | 0 |
| 8 | Uttarakannada | 3 | 0 | 0 |
| 9 | Davangere | 2 | 0 | 0 |
| 10 | Udupi | 1 | 0 | 0 |
| 11 | Tumkur | 1 | 0 | 1 |
| Total | | 64 | 5 | 3 |

ಈ ಎಲ್ಲಾ ಕೋವಿಡ್-19 ಸೋಂಕಿತರ ಸಂಪರ್ಕದಲ್ಲಿದವರ ಪತ್ತೆ ಮಾಡಲು ಪ್ರಾರಂಭಿಸಲಾಗಿದೆ.

**ಸೂಚನೆ:** ಕರ್ನಾಟಕದಲ್ಲಿ ಒಟ್ಟು ಪತ್ತೆ ಮಾಡಲಾಗಿರುವ 64 ಪ್ರಕರಣಗಳಲ್ಲಿ 6 ಪ್ರಕರಣಗಳು ಕೇರಳದವರಾಗಿದ್ದು, ಅವರು ಕರ್ನಾಟಕದ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅವರು ಕರ್ನಾಟಕದಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕರ್ನಾಟಕದಲ್ಲಿ ಈ ದಿನದವರೆಗೆ, **1,28,110** ಹೊರದೇಶದಿಂದ ಪ್ರಯಾಣಿಕರನ್ನು ತಪಾಸಣೆ ಮಾಡಲಾಗಿದೆ. ವಿಮಾನ ನಿಲ್ದಾಣವಾರು ವರದಿಗಳು ಈ ಕೆಳಕಂಡತೆ ಇವೆ.

1) ಕೆಂಪೇಗೌಡ ಅಂತರಾಷ್ಟ್ರೀಯ. ವಿಮಾನ ನಿಲ್ದಾಣ, ಬೆಂಗಳೂರು– 89,963.
   **ದಿನಾಂಕ 17.03.2020 ರಿಂದ 23.03.2020 ರವರೆಗೆ ಬಂದಿಳಿದ ಮತ್ತು ತಪಾಸಣೆಗೆ ಒಳಪಟ್ಟ ಒಟ್ಟು ಅಂತರ ರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ 10,773 .**
2) ಮಂಗಳೂರು ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ– 31,917 ಪ್ರಯಾಣಿಕರು ಮಾಡಲಾಗಿದೆ.
3) 6,230 ಪ್ರಯಾಣಿಕರನ್ನು ಮಂಗಳೂರು ಮತ್ತು ಕಾರವಾರ ಕಡಲ ಬಂದರುಗಳಲ್ಲಿ ತಪಾಸಣೆ ಮಾಡಲಾಗಿದೆ. ದಿನಾಂಕ 26–03–2020 ರಂದು 64 ಜನರನ್ನು ತಪಾಸಣೆ ಮಾಡಲಾಗಿದೆ.

| ಸಂಗ್ರಹ ವರದಿ | | | |
|---|---|---|---|
| ಚಟುವಟಿಕೆ | | ಈ ದಿನ | ಸಂಚಿತ |
| ಅ | ಅವಲೋಕನೆಗಾಗಿ ಪಟ್ಟಿ ಮಾಡಲ್ಪಟ್ಟವರು | 633 | 14115 |
| ಆ | ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿ ಇರಿಸಲ್ಪಟ್ಟವರು | 12 | 166 |
| ಇ | ಪರೀಕ್ಷೆ ಮಾಡಲು ಸಂಗ್ರಹಿಸಲಾದ ಒಟ್ಟು ಮಾದರಿಗಳು | 237 | 2838 |
| ಈ | ನೆಗೆಟಿವ್ ಎಂದು ವರದಿಯಾದ ಒಟ್ಟು ಫಲಿತಾಂಶಗಳು | 150 | 2563 |
| ಉ | ಖಚಿತ ಪಟ್ಟ ಫಲಿತಾಂಶಗಳು | 9 | 64 |

**ನಿಗದಿತ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿರಿಸಲ್ಪಟ್ಟವರ ವಿವರ**

| ಕ್ರ. ಸಂ. | ಜಿಲ್ಲೆಯ ಹೆಸರು | ಇಂದಿನ ಹೊಸ ಒಳರೋಗಿಗಳು | ಇಂದು ಬಿಡುಗಡೆ ಮಾಡಲಾದವರು | ಒಟ್ಟು ಪತ್ಯೇಕವಾಗಿರಿಸಿದವರು |
|---|---|---|---|---|
| 1 | ಬೆಂಗಳೂರು (RGICD) | 0 | 0 | 6 |
| 2 | ಬೆಂಗಳೂರು (ಗುರುತಿಸಲಾದ ಆಸ್ಪತ್ರೆಗಳು) | 8 | 15 | 33 |
| 3 | ದಕ್ಷಿಣ ಕನ್ನಡ | 0 | 5 | 30 |
| 4 | ಬಳ್ಳಾರಿ | 0 | 0 | 3 |
| 5 | ಕಲಬುರಗಿ | 0 | 0 | 19 |
| 6 | ಕೊಡಗು | 0 | 0 | 1 |
| 7 | ಉಡುಪಿ | 2 | 0 | 10 |
| 8 | ಬೀದರ್ | 0 | 0 | 1 |
| 9 | ಗದಗ | 0 | 0 | 11 |
| 10 | ಉತ್ತರ ಕನ್ನಡ | 0 | 0 | 15 |
| 11 | ಧಾರವಾಡ | 0 | 0 | 2 |
| 12 | ಹಾಸನ | 0 | 0 | 3 |
| 13 | ಚಿತ್ರದುರ್ಗ | 0 | 0 | 4 |
| 14 | ದಾವಣಗೆರೆ | 0 | 0 | 5 |
| 15 | ಮೈಸೂರು | 0 | 0 | 7 |
| 16 | ಶಿವಮೊಗ್ಗ | 0 | 0 | 4 |
| 17 | ಮಂಡ್ಯ | 0 | 1 | 1 |
| 18 | ತುಮಕೂರು | 2 | 0 | 8 |
| 19 | ಚಿಕ್ಕಮಗಳೂರು | 0 | 2 | 0 |
| 20 | ಚಿಕ್ಕಬಳ್ಳಾಪುರ | 0 | 0 | 3 |
| **ಒಟ್ಟು** | | **12** | **23** | **166** |

**ಇಂದಿನ ವಿಷಯಗಳು:**

1) ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 26.03.2020ರಂದು ರಾಜ್ಯದ ಎಲ್ಲಾ ಜಿಲ್ಲೆಗಳ ಹಿರಿಯ ಅಧಿಕಾರಿಯವರುಗಳೊಂದಿಗೆ ರಾಜ್ಯ ಮಟ್ಟದ ವಿಡಿಯೋ ಕಾನ್ಫರೆನ್ಸ್ ಸಭೆಯನ್ನು ನಡೆಸಲಾಗಿ, ರಾಜ್ಯದಲ್ಲಿನ ಸಧ್ಯ ಸ್ಥಿತಿ ಮತ್ತು ಕೋವಿಡ್ –19 ನ್ನು ಕಟ್ಟುಹಾಕುವ ನಿಟ್ಟಿನಲ್ಲಿ ಭಾರತ ಸರ್ಕಾರದಿಂದ ನೀಡಿರುವ ಮಾರ್ಗ ಸೂಚಿಗಳನ್ವಯ ಅನುಷ್ಠಾನ ಕುರಿತು ಪರಿಶೀಲನೆ ನಡೆಸಲಾಯಿತು.
2) ರಾಜ್ಯದಲ್ಲಿ ಕೋವಿಡ್–19 ಪರಿಸ್ಥಿತಿ ಮತ್ತು ಯಾವುದೇ ತುರ್ತ ಸಂದರ್ಭಗಳನ್ನು ನಿರ್ವಹಿಸುವಲ್ಲಿ ತಯಾರಿಯ ಕುರಿತು ಮಾನ್ಯ ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ಟಾಸ್ಕ್ ಪೋರ್ಸ್ ನಡೆಸಲಾಯಿತು.
3) ವಿಧಾನಸೌಧದಲ್ಲಿ ಇಂದು ಉನ್ನತ ಅಧಿಕಾರಿಗಳ ಸಭೆ ನಡೆಸಲಾಗಿ, ಸಂಪರ್ಕ ಸಾಧಿಸುವ 1000 ತಂಡಗಳನ್ನು ರಚಿಸುವಿಕೆ, ತರಬೇತಿ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು ಅಡೆತಡೆಗಳ ಕುರಿತ ವಿಸ್ತೃತ ಚರ್ಚೆ ನಡೆಸಲಾಯಿತು.
4) ಎ.ಬಿ.ಆರ್.ಕೆ ಕಾರ್ಡ್‌ಗಳನ್ನು ವಿತರಣೆಯನ್ನು ದಿನಾಂಕ 30.04.2020 ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ದಿನಾಂಕ 27.03.2020ರಂದು ಆಯುಕ್ತರು, ಆಕುಕ ರವರು ಸುತ್ತೋಲೆಯನ್ನು ಹೊರಡಿಸಿದರು.
5) ಎಲ್ಲಾ ಕೋವಿಡ್–19 ಪಾಸಿಟಿವ್ ವ್ಯಕ್ತಿಗಳು ಪ್ರಯಾಣಕ್ಕೆ ಬಳಸಿದ ಸಾರಿಗೆ ವಿಧಾನಗಳನ್ನು ಇಲಾಖೆಯ ವೆಬ್ ಸೈಟ್ https://karunadu.karnataka.gov.in/hfw ನಲ್ಲಿ ಪ್ರಕಟಿಸಲಾಗಿರುತ್ತದೆ ಮತ್ತು ಸಾಮಾಜಿಕ ಜಾಲತಾಣಗಳಲ್ಲಿಯೂ ಸಹ ಲಭ್ಯವಿರುತ್ತದೆ. ಅದರಂತೆ, ಯಾವುದೇ ವ್ಯಕ್ತಿ ಆಯಾ ದಿನಗಳಂದು ಈ ಸಾರಿಗೆ ವಿಧಾನಗಳಲ್ಲಿ ಪ್ರಯಾಣ ಬೆಳಸಿದ್ದೇ ಆದ್ದಲ್ಲಿ ಕೂಡಲೇ ಉಚಿತ ಆರೋಗ್ಯ ಸಹಾಯ ವಾಣಿ 104, 808–46848600 ಮತ್ತು 66692000 ಕ್ಕೆ ಸಂಪರ್ಕಿಸುವುದು.
6) ನಿರ್ದೇಶಕರು, ಆಕುಕ ಇಲಾಖೆರವರು, ರಾಜ್ಯ ಔಷಧ ನಿಯಂತ್ರಕರು, ರವರಿಗೆ ಪತ್ರದ ಮೂಲಕ ಸೂಚನೆ ನೀಡಿಲಾಗಿ, ಯಾವುದೇ ಗ್ರಾಹಕರಿಗೆ ***Chlorquine*** ಮತ್ತು ***Hydroxychlorquine*** ಉಳ್ಳ ಯಾವುದೇ ಔಷಧಿಗಳನ್ನು ವೈದ್ಯರ ಅಧಿಕೃತ ಚೀಟಿ (Prescription) ಇಲ್ಲದೆ ವಿತರಿಸಬಾರದು. ಸ್ಥಳಿಯವಾಗಿ ಅಗತ್ಯವಿರುವ ರೋಗಿಗಳಿಗೆ ಅವಶ್ಯಕವಿರುವ ಔಷಧಿಗಳನ್ನು ಉಚಿತವಾಗಿ ಮನೆಗೆ ತಲುಪಿಸುವಲ್ಲಿ ಕ್ರಮ ವಹಿಸಲು ಮತ್ತು **hand sanitizer, mask, PPE** ಗಳನ್ನು ಮನೆ ಕ್ವಾರಂಟೈನ್ ನಲ್ಲಿರುವ ವ್ಯಕ್ತಿಗಳು ಮತ್ತು ಅವರ ಆರೈಕೆ ಸೇವೆ/ಸಂಪರ್ಕದಲ್ಲಿರುವ ವ್ಯಕ್ತಿಗಳಿಗೆ ಹಾಗೂ ಕೋವಿಡ್–19 ತಡೆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಆದ್ಯತೆಯ ಮೇರೆಗೆ ಪೂರೈಸಲು ಮತ್ತು ಪರಿಕರಗಳ ದರವನ್ನು ನಿಯಂತ್ರಣದಲ್ಲಿಡುವಲ್ಲಿ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು.
7) ಕ್ವಾರಂಟೈನ್ ಅನ್ನು ಖಚಿತ ಪಡಿಸಿಕೊಳ್ಳಲು, ದಿನಾಂಕ 25.03.2020 ರಿಂದ ಇಂದಿನ ವರೆಗೂ ಒಟ್ಟು 84 ಪ್ರಥಮ ಸಂಪರ್ಕ ಪ್ರಕರಣ, 150 ದ್ವಿತಿಯ ಸಂಪರ್ಕ ಮತ್ತು 19869 ಪ್ರಯಾಣ ಹಿನ್ನಲೆಯಿರುವ ವ್ಯಕ್ತಿಗಳ ಎಡಗೈಯ ಅಂಗೈಯ ಹಿಂಭಾಗದಲ್ಲಿ **indelible ink** ನಿಂದ **Stamping** ಮಾಡಲಾಗಿದೆ.
8) ರಾಜ್ಯ ಸರ್ಕಾರವು (ಪೋಲಿಸ್ ಇಲಾಖೆ), ಇ–ಕಾರ್ಮಸ್ ಚಿಲ್ಲರೆ ವ್ಯಾಪಾರ/ನಿಯಂತ್ರಕರು ಮತ್ತು ಆನ್‌ಲೈನ್ ಸೇವೆಗಳನ್ನು ಕಾರ್ಯವಹಿಸಲು ಅನುಮತಿ ನೀಡಿದೆ. ಆದರೆ ಅವರುಗಳು ಸಿಬ್ಬಂದಿ ಮತ್ತು ವಾಹನಗಳಿಗೆ ಬೆಂಗಳೂರು ಜಿಲ್ಲೆಯ 8 ಉಪ ಆಯುಕ್ತರು – ಪೋಲಿಸ್ (ಎಲ್&ಓ) ರವರಿಂದ ಅಧಿಕೃತ ಪಾಸ್‌ಗಳನ್ನು ಹೊಂದಿರುವುದು ಕಡ್ಡಾಯವಿರುತ್ತದೆ.
9) ರಾಜ್ಯ ಸರ್ಕಾರವು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಪ್ರಯಾಣಿಕರು ಮತ್ತು ಕ್ವಾರಂಟೈನ್ ನಿಂದ ಬಿಡುಗಡೆ ಹೊಂದಿದ ವ್ಯಕ್ತಿಗಳ ಕುಟುಂಬ ಸದಸ್ಯರುಗಳಿಗೆ ಮಾರ್ಗ ಸೂಚಿಗಳನ್ನು ಪ್ರಕಟಿಸಿರುತ್ತದೆ.
10) ಭಾರತ ಸರ್ಕಾರವು ಪ್ರಯಾಣಕ್ಕೆ ಕುರಿತಂತೆ ಸುತ್ತೋಲೆಯನ್ನು ನೀಡಿರುತ್ತದೆ ಮತ್ತು ಕೋವಿಡ್–19 ಸಂಬಂಧಿತ ವೀಸಾ ನಿರ್ಭಂದನೆಗಳನ್ನು ಹೊರಡಿಸಿದೆ (No.4/1/2020-IR ದಿ.26.03.2020) ಅಂತರಾಷ್ಟ್ರೀಯ ಎಲ್ಲಾ ವಾಣಿಜ್ಯ ಪ್ರಯಾಣ ಸೇವೆಗಳನ್ನು ದಿನಾಂಕ 14.04.2020ರ ವರೆಗೆ 18.30hrs GMT ರ ವರೆಗೆ ಸ್ಥಗಿತಗೊಳಿಸಲು ತೀರ್ಮಾನಿಸಿದೆ. ಆದರೆ, ಈ ನಿರ್ಬಂಧನೆಯು ಎಲ್ಲಾ ಅಂತರಾಷ್ಟ್ರೀಯ ಕಾರ್ಗೋ ಸೇವೆ ಮತ್ತು DGCA ಅನುಮತಿ ಪಡೆದ ವಿಮಾನ ಸೇವೆಗಳಿಗೆ ಅನ್ವಯಿಸುವುದಿಲ್ಲ.
11) ಬಡ ಜನತೆ ಅನುಕೂಲಕ್ಕೆ ಮತ್ತು ಕೋವಿಡ್–19 ರ ವಿರುದ್ಧ ಹೋರಾಡುವ ನಿಟ್ಟಿನಲ್ಲಿ, ಮಾನ್ಯ ಆರ್ಥಿಕ ಸಚಿವರು, ಭಾರತ ಸರ್ಕಾರ ರವರು ರೂ.1.70 ಲಕ್ಷ ಕೋಟಿಗಳ ಪರಿಹಾರ ನಿಧಿಯನ್ನು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ಅಡಿ ಘೋಷಿಸಿರುತ್ತಾರೆ.

12) ಐ.ಸಿ.ಎಂ.ಆರ್., ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ ರವರ ಪ್ರಸ್ತಾವನೆಯಂತೆ ಸರ್ಕಾರಿ ಕ್ಯಾಂಪ್‌ಗಳಲ್ಲಿ ಕ್ವಾರನ್‌ಟೈನ್‌ನಲ್ಲಿರುವ 60 ವರ್ಷದ ಮೇಲ್ಪಟ್ಟ ವ್ಯಕ್ತಿಗಳಿಗೆ ಟೆಸ್ಟ್ ನೆಗೆಟಿವ್ ಬಂದರೆ ಮಾತ್ರ ಹಾಗೂ ಯಾವುದೇ ಸೋಂಕು ಲಕ್ಷಣಗಳು ಇಲ್ಲದಿದ್ದರೆ ಮಾತ್ರ ಕ್ವಾರನ್‌ಟೈನ್‌ನಿಂದ ಬಿಡುಗಡೆಗೊಳಿಸುವುದು ಮತ್ತು ಬಿಡುಗಡೆಗೊಂಡ 7 ದಿನಗಳವರೆಗೂ ಸದರಿಯವರು ಮನೆ ಕ್ವಾರನ್‌ಟೈನ್‌ನಲ್ಲಿ ಹಾಗೂ ವೈದ್ಯಕೀಯ ನಿಗಾವಣೆಯಲ್ಲಿ ಇರತಕ್ಕದ್ದು. ಒಂದು ವೇಳೆ ಸೋಂಕಿನ ಲಕ್ಷಣಗಳು ಕಂಡುಬಂದಲ್ಲಿ ತುರ್ತಾಗಿ ವೈದ್ಯಕೀಯ ಸೇವೆಗಾಗಿ ನಿಗಧಿತ ಆಸ್ಪತ್ರೆಗಳಿಗೆ ಸಂಪರ್ಕಿಸುವುದು.

13) **Home Quarantine enforcement squad** ತಂಡದವರು, ಸಾರ್ವಜನಿಕರಿಂದ ಪಡೆದ ದೂರುಗಳ ಮೇರೆಗೆ ನಿನ್ನೆ 28 ವ್ಯಕ್ತಿಗಳನ್ನು ಕ್ವಾರಂಟೈನ್ ಮಾಡಲಾಗಿ ಇದೂವರೆಗೂ ಒಟ್ಟು 80 ವ್ಯಕ್ತಿಗಳನ್ನು ಕ್ವಾರಂಟೈನ್ ಮಾಡಿರುತ್ತಾರೆ.

14) ನಿಯೋಜಿತ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಪಾಸಿಟಿವ್ ಪ್ರಕರಣಗಳು ಮತ್ತು ಶಂಕಿತರು ಮತ್ತು ಸಮೂಹ ಕ್ವಾರಂಟೀನ್ ಕೇಂದ್ರಗಳಲ್ಲಿ ಅಥವಾ ಮನೆಗಳಲ್ಲಿ ಕ್ವಾರಂಟೀನ್ ವ್ಯವಸ್ಥೆಯಲ್ಲಿ ಇರುವವರು ಕನಿಷ್ಠ 14 ದಿನಗಳ ಕಾಲ ಅಥವಾ ಪಾಸಿಟಿವ್ ಪ್ರಕರಣದ ಸರಣಿ ಮಾದರಿಗಳು ನೆಗೆಟಿವ್ ಎಂದು ಸಾಬೀತಾಗುವ ತನಕ ಅಥವಾ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಸಲಹೆ ಸಿಗುವ ತನಕ ಸಂಬಂಧಪಟ್ಟ ವ್ಯಕ್ತಿಗಳನ್ನು ಬಿಡುಗಡೆ ಮಾಡುವುದಿಲ್ಲ. ಪ್ರತ್ಯೇಕ ವ್ಯವಸ್ಥೆಯಲ್ಲಿ ಇಷ್ಟೊಂದು ಸುದೀರ್ಘ ಕಾಲ ಸಂಯಮದಿಂದ ಇರಲು ಮಾನಸಿಕ ಸ್ಥೈರ್ಯದ ಅಗತ್ಯವಿರುತ್ತದೆ. ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಮತ್ತು ಸ್ಥೈರ್ಯದ ಅಗತ್ಯವಿರುತ್ತದೆ. ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಮತ್ತು ಸಂಪರ್ಕಿತರಿಗೆ ಮಾನಸಿಕ ಆರೋಗ್ಯದ ಆಪ್ತ ಸಮಾಲೋಚನೆಗೆ ವ್ಯವಸ್ಥೆ ಮಾಡಿದೆ. ಈವರೆಗೆ 10248 ಸಂಖ್ಯೆಯ ಕೌನ್ಸೆಲಿಂಗ್ ನಡೆದಿದೆ.

15) P-60 ವ್ಯಕ್ತಿ ಕಾಂಗೊ ಎಕ್ಸ್‌ಪ್ರೆಸ್ಸ್ ರೈಲು ಮೂಖಾಂತರ ದಿನಾಂಕ 11.03.2020ರಂದು ದೆಹಲಿಯಿಂದ ಪ್ರಯಾಣ ಬೆಳೆಸಿ ದಿನಾಂಕ 14.03.2020, ರಾತ್ರಿ 12.30ಗಂಟೆಗೆ ಬೆಂಗಳೂರಿನ ಯಶವಂತಪುರಕ್ಕೆ ಬಂದಿರುತ್ತಾರೆ. ಬೆಳಗಿನ ಜಾವ ಕೆ.ಎಸ್.ಆರ್.ಟಿ.ಸಿ ಬಸ್ ಮುಖಾಂತರ ಯಶವಂತಪುರದಿಂದ ಶಿರಾ ತಾಲ್ಲೂಕು ತುಮಕೂರು ಜಿಲ್ಲೆಗೆ ತೆರಳಿರುತ್ತಾರೆ. ಈ ದಿನ ಮತ್ತು ಈ ಪ್ರಯಾಣ ಮೂಲಗಳ ಮುಖಾಂತರ ಯಾವುದೇ ಪ್ರಯಾಣಿಕರು ಪ್ರಯಾಣ ಬೆಳೆಸಿದ್ದೇ ಆದ್ದಲ್ಲಿ ತುರ್ತಾಗಿ ಇಲಾಖೆಯ ಉಚಿತ ಆರೋಗ್ಯ ಸಹಾಯವಾಣಿ 104, 808–46848600 ಮತ್ತು 66692000 ಕ್ಕೆ ಸಂಪರ್ಕಿಸುವುದು.

16) ದಿನಾಂಕ 17.03.2020 ರಂದು ಪಿ.63 ರವರು ಇ.ವೈ–32 ವಿಮಾನದ ಮುಖಾಂತರ ಅಭುದಭಿಗೆ ತಲುಪಿ, ದಿನಾಂಕ 18.03.2020 ರಂದು ಅಭುದಾಭಿಯಿಂದ ಇ.ವೈ–216 ಬೆಂಗಳೂರಿಗೆ ಬೆಳಗ್ಗೆ ಆಗಮಿಸಿರುತ್ತಾರೆ. ದಿನಾಂಕ 18.03.2020 ಬೆಳಗ್ಗೆ 8.00 ಗಂಟೆಗೆ ವಾಯು ವಜ್ರ ಬಸ್ಸಿನ ಮೂಲಕ ಬೆಂಗಳೂರು ವಿಮಾನ ನಿಲ್ದಾಣದಿಂದ ಮೆಜೆಸ್ಟಿಕ್‌ಗೆ ಬಂದಿಳಿದಿರುತ್ತಾರೆ. ಅದೇ ದಿನ ಸುಮಾರು 10.00 ಗಂಟೆಗೆ ಮೆಜೆಸ್ಟಿಕ್ ನಿಂದ ರಾಜಹಂಸ ಬಸ್ಸ್ ಮೂಲಕ ದಾವಣಗೆರೆಯನ್ನು ತಲುಪಿರುತ್ತಾರೆ. ಅದೇ ವಿಮಾನ ಮತ್ತು ಬಸ್ಸ್‌ನಲ್ಲಿ ಪ್ರಯಾಣ ಮಾಡಿರಬಹುದಾದ ಪ್ರಯಾಣಿಕರು ದಯವಿಟ್ಟು ಸಹಾಯವಾಣಿ ಸಂಖ್ಯೆ 104, 080–46848600, 66692000 ಅನ್ನು ಸಂಪರ್ಕಿಸಬಹುದು.

17) ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್‌ನ್ನು www.karnataka.gov.in. ಈ ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್–19 ರೋಗಿಯು ಪ್ರಯೋಗಶಾಲಾ ಫಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ಲಭ್ಯವಿರುತ್ತದೆ. ಅದರ ಜೊತೆಗೆ ಫಸ್ಟ್ ರೆಸ್‌ಪಾಂಡರ್ ಹಾಗೂ ಸಹಾಯವಾಣಿಗಳ ಸಂಖ್ಯೆ ಲಭ್ಯವಿರುತ್ತದೆ.

18) ಕೋವಿಡ್–19 ಎಲ್ಲಾ ರೀತಿಯ ಅನುಮಾನಗಳಿಗೆ ಸಹಾಯವಾಣಿ ಸಂಖ್ಯೆ 104 ರನ್ನು ಸಂಪರ್ಕಿಸಬಹುದಾಗಿದೆ.

104 ಆರೋಗ್ಯ ಸಹಾಯವಾಣಿ (ಶುಲ್ಕರಹಿತ ಕಾಲ್ ಸೆಂಟರ್) ಕೋವಿಡ್–19 ಕುರಿತ ಕರೆಗಳಿಗಾಗಿ 210 ಆಸನಗಳನ್ನು ಮೀಸಲಿರಿಸಿದೆ. ದಿನಾಂಕ 26.03.2020 ರಂದು 25,793 ಕರೆಗಳನ್ನು ಸ್ವೀಕರಿಸಲಾಗಿದೆ ಮತ್ತು 128 ಅಗತ್ಯ ಮಾರ್ಗದರ್ಶನದ ನೀಡುವ ಕರೆಗಳನ್ನು ಸೇರಿ ಒಟ್ಟು 47,374 ಹೊರ ಕರೆಗಳನ್ನು ಮಾಡಲಾಗಿದೆ.

**ಸಾರ್ವಜನಿಕರಿಗೆ ಮನವಿ:** ಕೋವಿಡ್–19 ಪೀಡಿತ ದೇಶಗಳಿಂದ ಹಿಂತಿರುಗಿರುವ ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರುವ ಯಾರಾದರೂ ಭಾರತಕ್ಕೆ ಹಿಂತಿರುಗಿದ ದಿನದಿಂದ 14 ದಿನಗಳವರೆಗೆ, ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಮನೆಯಲ್ಲಿ ಪ್ರತ್ಯೇಕವಾಗಿರುವುದು ಹಾಗೂ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡಿಕೊಳ್ಳುವುದು ಅಥವಾ 104 ಸಹಾಯವಾಣಿಗೆ ಕರೆ ಮಾಡುವುದು. ವೈಯಕ್ತಿಕ ಸ್ವಚ್ಛತೆಯನ್ನು

ಕಾಪಾಡಿಕೊಳ್ಳಿ. ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ / ಟಿಶ್ಯೂ ಪೇಪರನ್ನು ಬಳಸಿ, ಕೈ ಸ್ವಚ್ಛಗೊಳಿಸುವ ದ್ರಾವಣ ಅಥವಾ ನೀರು ಮತ್ತು ಸೋಪು ಬಳಸಿ ಆಗಾಗ ಕೈಗಳನ್ನು ತೊಳೆದುಕೊಳ್ಳಿ ಮತ್ತು ಸಾಮಾಜಿಕ ಸಮೂಹ ಗುಂಪು ಸೇರುವಿಕೆಯನ್ನು ಮಾಡಬೇಡಿ.

***ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ***
***ನಾವೆಲ್ಲರೂ ಒಟ್ಟಾಗಿ ಕೋವಿಡ್–19 ವಿರುದ್ಧ ಹೋರಾಡೋಣ***
***ಸಹಾಯವಾಣಿ ಸಂಖ್ಯೆ 080–46848600, 080–66692000 & 104***

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಾಲತಾಣದಲ್ಲಿ ಲಭ್ಯವಿದೆ: https://karunadu.karnataka.gov.in/hfw/kannada/Pages/covid-19.aspx

**********